ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ರಾಮರೆಡ್ಡಿಯವರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ದಿವಸವೇ ನಾನು ಸಂಬಂಧಪಟ್ಟರತಕ್ಕಂಥ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ರಾಯಚೂರಿಗೆ ಮತ್ತು ಅಲ್ಲಿನ ಇರಿಗೇಷನ್ ಇಲಾಖೆಗೆ ಮಾತನಾಡಿ ನಾಳೆಯೊಳಗಾಗಿ ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಇನ್ನು ಒಂದು ಗಂಟೆಯೊಳಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು: ಒಳ್ಳೆಯದು. ಡೈನಾಮಿಕ್ ಮಿನಿಸ್ಟರ್ ಅಂದರೆ ಹೀಗಿರಬೇಕು.

(ಇ) ಬೆಂಗಳೂರು ನಗರದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆ

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸನ್ಮಾನ್ಯ ಸಭಾಧ್ಯಕ್ಷರೆ, ತಮ್ಮ ಮೂಲಕ ಬೆಂಗಳೂರು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುವುದೇನೆಂದರೆ, ಬೆಂಗಳೂರು ನಗರದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಕಳೆದ 15-20 ದಿವಸಗಳಿಂದ ಕುಡಿಯುವ ನೀರಿಲ್ಲದೆ ಜನ ತತ್ತರಿಸುತ್ತಿದ್ದಾರೆ. ವಿಶೇಷವಾಗಿ ರಾಜಾಜಿನಗರ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮಿ ಬಡಾವಣೆ ಮತ್ತು ಬಸವೇಶ್ವರನಗರ ಈ ಪ್ರದೇಶಗಳಲ್ಲಿ ಕುಡಿಯುವ ನೀರಿಲ್ಲದೆ ತೀರಾ ಹಾಹಾಕಾರ ಪರಿಸ್ಥಿತಿ ಉಂಟಾಗಿದೆ. ಅಕಸ್ಮಾತ್ ನೀರು ಬಂದರೂ ಕೂಡ ಹುಳುಗಳಿಂದ ಕೂಡಿರುವ ಕಲುಷಿತ ನೀರು ಆದಾಗಿರುತ್ತದೆ. ಎರಡು ದಿವಸಕ್ಕೆ ಒಂದು ಸಾರಿ ನೀರು ಕೊಡುತ್ತೇವೆಂದು ಹೇಳಿರುವ ಜಲಮಂಡಳಿಯವರು ಇವತ್ತಿನ ದಿವಸ ಹತ್ತು ದಿವಸ ಆದರೂ ಜನಗಳಿಗೆ ನೀರು ಕೊಡುತ್ತಿಲ್ಲ. ಮಾರ್ಚ್ 10ನೇ ತಾರೀಖಿಗೆ ಈ ಸ್ಥಿತಿ ಆದರೆ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಯಾವ ಸ್ಥಿತಿಗೆ ಬರಬಹುದು? ನನಗೆ ಬಂದಿರುವ ಖಚಿತ ಮಾಹಿತಿ ಪ್ರಕಾರ ತಿಪ್ಪಗೊಂಡನಹಳ್ಳಿ ಕೆರೆಯಿಂದ ಸರಬರಾಜಾಗುತ್ತಿದ್ದ ನೀರನ್ನು ಇವತ್ತು ರಾತ್ರಿ ಅಥವಾ ನಾಳೆಯಿಂದ ಬಂದ್ ಮಾಡುತ್ತಾರೆಂದು ತಿಳಿದುಬಂದಿದೆ. ಈ ಒಂದು ಹಿನ್ನೆಲೆಯಲ್ಲಿ ಆ ಭಾಗದ ಜನಕ್ಕೆ ನೀರು ಕೊಡುವುದಕ್ಕೆ ಜಲ ಮಂಡಳಿ ಏನು ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪ್ರತಿ ದಿವಸ 30 ದಶ ಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿತ್ತು. ಆದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ನೈರುತ್ಯ ಮತ್ತು ಈಶಾನ್ಯ ವಲಯದಲ್ಲಿ ಮಳೆಯ ವೈಪರೀತ್ಯದಿಂದ ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿರುವ ಬಸವೇಶ್ವರನಗರ ಹಾಗೂ ನಗರದ ಪಶ್ಚಿಮ ಬಡಾವಣೆಗಳಿಗೆ ಕಾವೇರಿ ನದಿ ಮೂಲದಿಂದ ಪ್ರತಿ ದಿವಸ 50 ದಶ ಲಕ್ಷ ಗ್ಯಾಲನ್ ನೀರು

ಒದಗಿ [illegible] ತೆಗೆದುಕೊಂಡಿದ್ದೇವೆ. ಅದಕ್ಕಾಗಿ 600 ಮಿಲಿಮೀಟರ್ ಅಗಲ [illegible] ಕಿ.ಮೀ. ರಸ್ತೆಯಲ್ಲಿ ತೆಗೆದುಕೊಂಡು ಹೋಗಿ ಬಸವನ [illegible] ಜಲಾಶಯದ ಹೊರ ಪೈಪ್‌ಗೆ ಜೋಡಣೆ ಮಾಡಿ ಅಲ್ಲಿಂದ ಹೆಚ್ಚುವರಿಯಾಗಿ 13 ದಶಲಕ್ಷ ಗ್ಯಾಲನ್ ನೀರನ್ನು ಚಂದ್ರ ಲೇ-ಔಟ್ ಬಡಾವಣೆಯಲ್ಲಿರುವ ಜಲಾಶಯಕ್ಕೆ ಪಂಪ್ ಮಾಡಿ ಅಲ್ಲಿಂದ ನಗರದ ಪಶ್ಚಿಮ ಪ್ರದೇಶಗಳ ಬಡಾವಣೆಗಳಿಗೆ ಸರಬರಾಜು ಮಾಡಲು ಯೋಜಿಸಲಾಗಿದೆ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಬಾರದಂಥ ಸಂದರ್ಭದಲ್ಲಿ ಈ ಭಾಗಗಳಿಗೆ ಪೂರ್ತಿಯಾಗಿ ಕಾವೇರಿ ನೀರನ್ನೇ ಸರಬರಾಜು ಮಾಡಿ ಜನರುಗಳಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇವೆ.

(ಈ) ಗಂಗಾಕಲ್ಯಾಣ ಯೋಜನೆ ಕುರಿತು

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿರತಕ್ಕಂಥ ರೈತರುಗಳ ಜಮೀನುಗಳಿಗೆ ನೀರು ಹಾಯಿಸಬೇಕೆನ್ನುವ ಒಂದು ಘನ ಉದ್ದೇಶದಿಂದ ಗಂಗಾ ಕಲ್ಯಾಣ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿತ್ತು. ಈ ಯೋಜನೆಯನ್ನು ಜಾರಿ ಮಾಡಿದ ಮೇಲೆ ಯಾವರೀತಿ ಅನುಕೂಲವಾಗಿದೆ ಎಂಬ ಬಗ್ಗೆ ನೋಡುವ ವ್ಯವಧಾನ ಸರ್ಕಾರಕ್ಕೆ ಇಲ್ಲವೆಂದು ನನಗನಿಸುತ್ತದೆ. ಇದುವರೆಗೆ ಮಾಡಿರತಕ್ಕಂಥ ಗಂಗಾಕಲ್ಯಾಣ ಯೋಜನೆಯಲ್ಲಿ ಎಷ್ಟು ಗಂಗಾಕಲ್ಯಾಣ ಯೋಜನೆಗಳು ಸ್ಥಗಿತವಾಗಿವೆ? ಎಷ್ಟು ಗಂಗಾಕಲ್ಯಾಣ ಯೋಜನೆಯಲ್ಲಿ ನೀರು ಹರಿಯುತ್ತಿವೆ ಎಂಬ ಬಗ್ಗೆ ವರದಿಯನ್ನು ತರಿಸಿದರೆ ಇದರಲ್ಲಿ ಎಷ್ಟು ಅನ್ಯಾಯವಾಗಿದೆಯೆಂದು ಗೊತ್ತಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ವರ್ಗದವರ ಜನರಿಗೆ ಎಷ್ಟು ಅನ್ಯಾಯವಾಗಿದೆ? ಅವರ ಹೆಸರಿನಲ್ಲಿ ಎಷ್ಟು ಹಣವನ್ನು ಲೂಟಿ ಮಾಡಿದ್ದಾರೆ? ಎಂಬುದು ಇದರಿಂದ ತಿಳಿಯುತ್ತದೆ. ನನ್ನ ಕ್ಷೇತ್ರದಲ್ಲಿ ಗಂಗಾಕಲ್ಯಾಣ ಯೋಜನೆ ಜಾರಿಗೆ ಬಂದ ದಿನದಿಂದ ಇದುವರೆಗೆ ಯಾವ ಯಾವ ಯೋಜನೆಗಳು ಕಾರ್ಯಗತವಾಗಿವೆಯೋ ಅಲ್ಲಿ ಒಂದು ಎಕರೆ ಜಮೀನಿಗೂ ನೀರು ಹರಿದಿಲ್ಲ. ತುಂಗಾ ಮತ್ತು ಮಾಲತಿ ನದಿಯಿಂದ, ವಿದ್ಯುಚ್ಛಕ್ತಿ ಮೋಟಾರುಗಳನ್ನು ಅಳವಡಿಸಿ ನೀರು ಎತ್ತುವ ಯೋಜನೆ ಮಾಡಲಾಗಿತ್ತು. ಅಲ್ಲೂ ಸಹಾ ಕಳಪೆ ಕಾಮಗಾರಿಗಳನ್ನು ಮಾಡಿ ಸೆಕೆಂಡ್ ಹ್ಯಾಂಡ್ ಹಳೇ ಮೋಟಾರ್‌ಗಳನ್ನು ಅಳವಡಿಸಿ ಸಾಕಷ್ಟು ಹಣವನ್ನು ಹೊಡೆದು ತಿಂದು ಹರಿಜನರ ಒಂದು ಎಕರೆ ಭೂಮಿಗೂ ನೀರು ಬರದ ಹಾಗೆ ಮತ್ತು ಅವರ ಆರ್ಥಿಕ ಸ್ಥಿತಿಗತಿ ಮೇಲೆ ಏರದ ಹಾಗೆ ಒಂದು ವ್ಯವಸ್ಥಿತವಾದ ಕೆಲಸವನ್ನು ಮಾಡಿ, ಆ ಕೆಲಸ ಮಾಡಿರತಕ್ಕಂಥವರೆಲ್ಲರೂ ಬಚಾವ್ ಆಗಿದ್ದಾರೆ. ಆದುದರಿಂದ, ಇದರ ಬಗ್ಗೆ ದಯಮಾಡಿ ಸರ್ಕಾರ ವಿಚಾರಣೆ ಮಾಡಿಸುತ್ತದೆಯಾ? ಮತ್ತು ಈ ಗಂಗಾಕಲ್ಯಾಣ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಮಾಡಿ ಪರಿಶಿಷ್ಟಜಾತಿ ಮತ್ತು ವರ್ಗದವರ ಜಮೀನುಗಳಿಗೆ ನೀರು ಹರಿಸತಕ್ಕಂಥ ಕೆಲಸವನ್ನು ಮಾಡಲಾಗುತ್ತದೆಯೇ ಎಂದು ಮಾನ್ಯ